All India Radio: Bangalore
National Bulletin In Kannada
06.10.2026 1.10 pm

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
06.10.2026 1.10 pm

<>><><*><><<>

ಮುಖ್ಯಾಂಶಗಳು

೧. ತಮಿಳುನಾಡು, ಪುದುಚೇರಿ, ಪಶ್ಚಿಮ ಬಂಗಾಳದ ಐದು ವಿಧಾನಸಭಾ ಕ್ಷೇತ್ರಗಳು, ಅಸ್ಸಾಂನ ಒಂದು ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆ; ಮತದಾನ ಪ್ರಗತಿಯಲ್ಲಿ

೨. ವಿಶಾಖಪಟ್ಟಣದಲ್ಲಿ ಭಾರತೀಯ ನೌಕಾಪಡೆಯ ಫ್ಲೀಟ್ ಸಪೋರ್ಟ್‌ಶಿಪ್-೧ ಉದ್ಘಾಟಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್

೩. ನೈಜೀರಿಯಾದಲ್ಲಿ ಸೇನಾ ವಿಮಾನ ಪತನ: ೩೨ ಮಂದಿ ಸಾವು

೪. ಟಿ-೨೦ ಕ್ರಿಕೆಟ್: ಸರಣಿಯ ಮೊದಲ ಪಂದ್ಯದಲ್ಲಿಂದು ಭಾರತ- ವೆಸ್ಟ್ ಇಂಡೀಸ್ ಮುಖಾಮುಖಿ

<>><><*><><<>

ತಮಿಳುನಾಡು, ಪುದುಚೇರಿ ಮತ್ತು ಪಶ್ಚಿಮ ಬಂಗಾಳದ ಐದು ವಿಧಾನಸಭಾ ಕ್ಷೇತ್ರಗಳು ಹಾಗೂ ಅಸ್ಸಾಂನ ಒಂದು ಲೋಕಸಭಾ ಕ್ಷೇತ್ರದ ಉಪಚುನಾವಣೆಯ ಮತದಾನ ಪ್ರಗತಿಯಲ್ಲಿದೆ. ಚುನಾವಣಾ ಆಯೋಗದ ಮಾಹಿತಿ ಪ್ರಕಾರ, ಬೆಳಗ್ಗೆ ೧೧ ಗಂಟೆಯ ವೇಳೆಗೆ ತಮಿಳುನಾಡಿನ ಮಧುರಾಂತಕಂನಲ್ಲಿ ಶೇಕಡ ೩೫.೫೫ ಮತ್ತು ಧಾರಾಪುರಂ ಶೇಕಡ ೩೭.೨೮, ಪುದುಚೇರಿಯ ತಟ್ಟಂಚಾವಡಿ ಶೇಕಡ ೩೯.೧೬ ಹಾಗೂ ಪಶ್ಚಿಮ ಬಂಗಾಳದ ರೆಜಿನಗರ ಶೇಕಡ ೩೮.೭೧ ಮತ್ತು ನಂದಿಗ್ರಾಮ ಶೇಕಡ ೪೩.೯೫ ಹಾಗೂ ಅಸ್ಸಾಂನ ನಾಗಾಂ ಲೋಕಸಭಾ ಕ್ಷೇತ್ರದಲ್ಲಿ ಶೇಕಡ ೩೭.೮೨ ರಷ್ಟು ಮತದಾನವಾಗಿದೆ.

<>><><*><><<>

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ವಿಶಾಖಪಟ್ಟಣದ ಹಿಂದೂಸ್ತಾನ್ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ಇಂದು ಭಾರತೀಯ ನೌಕಾಪಡೆಯ ಫ್ಲೀಟ್ ಸಪೋರ್ಟ್ ಶಿಪ್-೧ ಉದ್ಘಾಟಿಸಿದ್ದು, ಫ್ಲೀಟ್ ಸಪೋರ್ಟ್ ಶಿಪ್-೫ರ ಕೀಲ್ ಅಳವಡಿಕೆಗೆ ಚಾಲನೆ ನೀಡಿದರು. ಇದೇ ವೇಳೆ ಅವರು ನವೀಕರಿಸಲಾದ ಸ್ಲಿಪ್‌ವೇ-೪ ಮತ್ತು ೩೦೦ ಟನ್ ಸಾಮರ್ಥ್ಯದ ಗೋಲಿಯತ್ ಕ್ರೇನ್ ಲೋಕಾರ್ಪಣೆಗೊಳಿಸಿದರು. ಭಾರತೀಯ ನೌಕಾಪಡೆಗಾಗಿ ನಿರ್ಮಿಸಲಾಗುತ್ತಿರುವ ಐದು ಫ್ಲೀಟ್ ಸಪೋರ್ಟ್‌ಶಿಪ್‌ಗಳಲ್ಲಿ ಮೊದಲನೆಯದಾದ ಎಫ್‌ಎಸ್‌ಎಸ್-೧, ಮುಂದಿನ ೧೮ ತಿಂಗಳಲ್ಲೇ ಬಂಗಾಳ ಕೊಲ್ಲಿಯಲ್ಲಿ ನಿಯೋಜನೆಗೊಳ್ಳಲಿದೆ. ೪೩ ಸಾವಿರದ ೫೦೦ ಟನ್ ತೂಕದ ಈ ಹಡಗುಗಳು ಸಮುದ್ರದಲ್ಲಿರುವ ಯುದ್ಧನೌಕೆಗಳಿಗೆ ಅಗತ್ಯ ಸಾಮಗ್ರಿ ಪೂರೈಸುವ ಮೂಲಕ ಹಿಂದೂ ಮಹಾಸಾಗರ ಪ್ರದೇಶದಲ್ಲಿ ನೌಕಾಪಡೆಯ ಕಾರ್ಯಾಚರಣಾ ಸಾಮರ್ಥ್ಯ ಹೆಚ್ಚಿಸಲಿವೆ.

<>><><*><><<>

ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' ಪ್ರಕ್ರಿಯೆಯಲ್ಲಿನ ಅಕ್ರಮಗಳ ಆರೋಪ ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು, ವಿರೋಧ ಪಕ್ಷಗಳು ಇಂದು ಸಂಸತ್ ಭವನದಿಂದ ಭಾರತೀಯ ಚುನಾವಣಾ ಆಯೋಗದ ಪ್ರಧಾನ ಕಚೇರಿಯಾದ 'ನಿರ್ವಚನ ಸದನ'ದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿವೆ. ಆದರೆ, ಚುನಾವಣಾ ಆಯೋಗದ ಕಡೆಗೆ ತೆರಳುತ್ತಿದ್ದ ಪ್ರತಿಭಟನಾಕಾರರನ್ನು ಭದ್ರತಾ ಸಿಬ್ಬಂದಿ ತಡೆದರು. ಕಾಂಗ್ರೆಸ್ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಅನೇಕ ಸಂಸದರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

<>><><*><><<>

ದೇಶದಲ್ಲಿ ಅರಾಜಕತೆಯ ವಾತಾವರಣ ಸೃಷ್ಟಿಸಲು ಪ್ರತಿಪಕ್ಷಗಳು, ವಿಶೇಷವಾಗಿ ಕಾಂಗ್ರೆಸ್ ಪ್ರಯತ್ನಿಸುತ್ತಿವೆ ಎಂದು ಬಿಜೆಪಿ ಆರೋಪಿಸಿದೆ. ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ, ದೇಶದ ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ಪ್ರತಿಪಕ್ಷಗಳು ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿವೆ ಎಂದು ಆರೋಪಿಸಿದರು. ಭಾರತೀಯ ಸೇನೆ, ಸುಪ್ರೀಂ ಕೋರ್ಟ್, ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಹಾಗೂ ವಿದ್ಯುನ್ಮಾನ ಮತಯಂತ್ರಗಳ ವಿರುದ್ಧವೂ ಪ್ರತಿಪಕ್ಷಗಳು ಕಾಲಕಾಲಕ್ಕೆ ಆರೋಪ ಮಾಡಿವೆ. ಕಳೆದ ಕೆಲವು ವಾರಗಳಿಂದ ಚುನಾವಣಾ ಆಯೋಗವನ್ನು ಪ್ರತಿಪಕ್ಷಗಳು ಗುರಿಯಾಗಿಸಿಕೊಂಡಿವೆ ಎಂದು ಸಂಬಿತ್ ಪಾತ್ರಾ ದೂರಿದರು.

<>><><*><><<>

ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ದೇಶಾದ್ಯಂತ, 'ಜನ ಸೇವೆಯೇ ದೇಶ ಸೇವೆ' ಎಂಬ ಅಭಿಯಾನ ನಡೆಯುತ್ತಿದೆ. ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ '೩೭೦ನೇ ವಿಧಿ ರದ್ದು; ಒಂದು ದೇಶ ಒಂದು ಸಂವಿಧಾನ' ಕುರಿತ ಒಂದು ವರದಿ ಇಲ್ಲಿದೆ. ೩೭೦ನೇ ವಿಧಿಯು ಎಪ್ಪತ್ತು ವರ್ಷಗಳ ಕಾಲ ಅಸ್ತಿತ್ವದಲ್ಲಿತ್ತು. ಯಾವುದೇ ಸರ್ಕಾರವೂ ಆ ವಿಷಯದ ಗೋಜಿಗೆ ಹೋಗಲಿಲ್ಲ. ಅದಕ್ಕೆ ಕಾರಣ ಅವರು ಆ ವಿಧಿಯ ಪರವಾಗಿದ್ದರು ಎಂದಲ್ಲ, ಬದಲಿಗೆ ಅದನ್ನು ರದ್ದುಗೊಳಿಸುವುದರಿಂದ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಅವರಿಗಿದ್ದ ಭಯವೇ ಕಾರಣವಾಗಿತ್ತು. ೨೦೧೯ರಲ್ಲಿ ಕಾಶ್ಮೀರ ಕಣಿವೆಯಲ್ಲಿ ಸುದೀರ್ಘ ೫೧ ದಿನಗಳ ಕಾಲ ಕರ್ಫ್ಯೂ ಜಾರಿಯಲ್ಲಿತ್ತು. ಕೇವಲ ಒಬ್ಬ ವ್ಯಕ್ತಿಯ ಹತ್ಯೆಯ ಕಾರಣದಿಂದಾಗಿ ಅಲ್ಲಿನ ಶಾಲೆಗಳು ಎಂಟು ತಿಂಗಳ ಕಾಲ ಮುಚ್ಚಲ್ಪಟ್ಟಿದ್ದವು. ಎಲ್ಲರೂ ಗೊಂದಲ ಅಥವಾ ಅಶಾಂತಿ ಉಂಟಾಗಬಹುದೆಂದು ನಿರೀಕ್ಷಿಸಿದ್ದರು. ಯಾವುದೇ ಹಿಂಸಾಚಾರವನ್ನು ನಿಯಂತ್ರಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬಲವಾದ ಯೋಜನೆಯನ್ನು ಸಿದ್ಧಪಡಿಸಿತ್ತು. ಘೋಷಣೆ ಮತ್ತು ಅದರ ಅನುಷ್ಠಾನದ ನಡುವೆ ಯಾವುದೇ ಅಂತರವಿರದಂತೆ, ಒಂದೇ ದಿನದಲ್ಲಿ ರಾಷ್ಟ್ರಪತಿಗಳ ಆದೇಶ, ಸಂಸತ್ತಿನ ನಿರ್ಣಯ ಮತ್ತು ಕಾಯ್ದೆಯನ್ನು ಮಂಡಿಸಲಾಯಿತು. ಆ ಬೇಸಿಗೆಯು ಶಾಂತಿಯುತವಾಗಿ ಕಳೆಯಿತು. ೩೭೦ನೇ ವಿಧಿಯು ಯಾವಾಗಲೂ ಒಂದು ತಾತ್ಕಾಲಿಕ ನಿಬಂಧನೆಯಾಗಿಯೇ ಇತ್ತು ಎಂದು ಅಭಿಪ್ರಾಯಪಟ್ಟ ಸುಪ್ರೀಂ ಕೋರ್ಟ್, ೨೦೨೩ರ ಡಿಸೆಂಬರ್‌ನಲ್ಲಿ ಈ ಸಂಪೂರ್ಣ ಪ್ರಕ್ರಿಯೆಯನ್ನು ಎತ್ತಿಹಿಡಿಯಿತು.

ನಂತರ ೨೦೨೪ರಲ್ಲಿ ವಿಧಾನಸಭೆ ಚುನಾವಣೆಗಳು ನಡೆದವು; ಇವು ಒಂದು ದಶಕದ ಅವಧಿಯಲ್ಲಿ ನಡೆದ ಮೊದಲ ಚುನಾವಣೆಗಳಾಗಿದ್ದವು. ೧೯೪೭ರಲ್ಲೇ ಈ ವಿಧಿಯನ್ನು 'ತಾತ್ಕಾಲಿಕ' ಎಂದು ಕರೆಯಲಾಗಿತ್ತು. ಆದರೆ ಅದನ್ನು ಆ ರೀತಿಯಾಗಿ ಪರಿಗಣಿಸಲು ಎಪ್ಪತ್ತು ವರ್ಷಗಳೇ ಬೇಕಾಯಿತು.

<>><><*><><<>

ನೈಜೀರಿಯಾದ ಬೆನಿನ್ ಸಿಟಿಯಿಂದ ಲಾಗೋಸ್‌ಗೆ ತೆರಳುತ್ತಿದ್ದ ಸೇನಾ ವಿಮಾನ ಪತನಗೊಂಡಿದ್ದು, ೨೫ ಪ್ರಯಾಣಿಕರು ಮತ್ತು ೭ ಸಿಬ್ಬಂದಿ ಸೇರಿದಂತೆ ೩೨ ಮಂದಿ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ವಿಮಾನದಲ್ಲಿದ್ದ ಯಾರೂ ಬದುಕುಳಿದಿಲ್ಲ ಎಂದು ನೈಜೀರಿಯಾ ಅಧ್ಯಕ್ಷ ಬೋಲಾ ಟಿನುಬು ದೃಢಪಡಿಸಿದ್ದಾರೆ. ವಿಮಾನ ಪತನದ ಕಾರಣ ಪತ್ತೆಹಚ್ಚಲು ಸಮಗ್ರ ತನಿಖೆ ನಡೆಸುವಂತೆ ಅವರು ನೈಜೀರಿಯಾ ವಾಯುಪಡೆಗೆ ಸೂಚಿಸಿದ್ದಾರೆ. ವಾಡಿಕೆಯ ಕಾರ್ಯಾಚರಣೆಯಲ್ಲಿದ್ದ ವಿಮಾನದೊಂದಿಗೆ ವಾಯು ಸಂಚಾರ ನಿಯಂತ್ರಕರ ಸಂಪರ್ಕ ಕಡಿತಗೊಂಡ ಬಳಿಕ, ನೈಜೀರಿಯಾದ ನೈಋತ್ಯ ಭಾಗದ ಇಗ್ಬೊಕೊಡಾ ಕರಾವಳಿ ಪಟ್ಟಣದ ಸಮೀಪ ಅವಶೇಷಗಳು ಪತ್ತೆಯಾಗಿವೆ.

<>><><*><><<>

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸುಧಾರಣೆ ಕೈಗೊಳ್ಳದಿದ್ದರೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಸದಸ್ಯ ರಾಷ್ಟ್ರಗಳಿಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಎಚ್ಚರಿಕೆ ನೀಡಿದ್ದಾರೆ. ಸ್ಥಗಿತಗೊಂಡಿರುವ ಸುಧಾರಣಾ ಪ್ರಕ್ರಿಯೆಯನ್ನು ಮುಂದುವರಿಸುವಂತೆ ಸದಸ್ಯ ರಾಷ್ಟ್ರಗಳಿಗೆ ಅವರು ಕರೆ ನೀಡಿದ್ದಾರೆ. ವಿಶ್ವಸಂಸ್ಥೆಯ ಸದಸ್ಯತ್ವ ವಿಸ್ತರಿಸಿರುವ ಹಿನ್ನೆಲೆಯಲ್ಲಿ ಭದ್ರತಾ ಮಂಡಳಿಯನ್ನೂ ವಿಸ್ತರಿಸಿ, ಹೆಚ್ಚಿನ ಸದಸ್ಯ ರಾಷ್ಟ್ರಗಳಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸಬೇಕು ಎಂಬುದು ಆಂಟೋನಿಯೊ ಗುಟೆರಸ್ ಅವರ ನಿಲುವಾಗಿದೆ ಎಂದು ಗುಟೆರಸ್ ಅವರ ಉಪ ವಕ್ತಾರ ಫರ್ಹಾನ್ ಹಕ್ ಹೇಳಿದ್ದಾರೆ.

<>><><*><><<>

ಲಕ್ನೋದ ಭಾರತರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳ ನಡುವಿನ ಐದು ಪಂದ್ಯಗಳ ಟಿ-೨೦ ಕ್ರಿಕೆಟ್ ಅಂತಾರಾಷ್ಟ್ರೀಯ ಸರಣಿಯ ಮೊದಲ ಪಂದ್ಯ ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೭ ಗಂಟೆಗೆ ಆರಂಭವಾಗಲಿದೆ. ೨೦೨೬ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ನಂತರ ಮತ್ತು ಏಕದಿನ ಅಂತಾರಾಷ್ಟ್ರೀಯ ಸರಣಿಯಲ್ಲಿ ೨-೧ ಅಂತರದ ಭರ್ಜರಿ ಜಯ ಸಾಧಿಸಿದ ನಂತರ, ಆತಿಥೇಯ ತಂಡ, ವೆಸ್ಟ್ ಇಂಡೀಸ್ ವಿರುದ್ಧ ತಮ್ಮ ಗೆಲುವಿನ ಓಟ ಮುಂದುವರಿಸುವ ಗುರಿ ಹೊಂದಿದೆ.

<>><><*><><<>

ಟೋಕಿಯೋದಲ್ಲಿ ಇಂದು ನಡೆಯಲಿರುವ ಜಪಾನ್ ಓಪನ್ ಟೆನಿಸ್ ಪಂದ್ಯಾವಳಿಯ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ವಿಶ್ವದ ೩ನೇ ಶ್ರೇಯಾಂಕದ ಆಟಗಾರ ಕಾರ್ಲೋಸ್ ಅಲ್ಕರಾಜ್, ೧೯ನೇ ಶ್ರೇಯಾಂಕದ ಜಿರಿ ಲೆಹೆಕಾ ಅವರನ್ನು ಎದುರಿಸಲಿದ್ದಾರೆ.  ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ ೨.೩೦ಕ್ಕೆ ಆರಂಭವಾಗಲಿದೆ.

ಪುರುಷರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ, ಅಮೆರಿಕದ ಆಸ್ಟಿನ್ ಕ್ರಜಿಚೆಕ್ ಮತ್ತು ಕ್ರೊಯೇಷಿಯಾದ ನಿಕೋಲಾ ಮೆಕ್ಟಿಕ್ ಜೋಡಿ, ಫ್ರಾನ್ಸ್‌ನ ಥಿಯೋ ಅರಿಬಾಗೆ ಮತ್ತು ಅಲ್ಬಾನೊ ಒಲಿವೆಟ್ಟಿ ಜೋಡಿಯನ್ನು ಎದುರಿಸಲಿದೆ.

<>><><*><><<>

ಚೀನಾ ಓಪನ್ ಟೆನಿಸ್ ಪಂದ್ಯಾವಳಿಯ ಸರ್ಬಿಯಾದ ನೊವಾಕ್ ಜೊಕೊವಿಚ್, ಪುರುಷರ ಸಿಂಗಲ್ಸ್ ಫೈನಲ್ ಪ್ರವೇಶಿಸಿದ್ದಾರೆ. ಸೆಮಿಫೈನಲ್‌ನಲ್ಲಿ ರಷ್ಯಾದ ಡ್ಯಾನಿಲ್ ಮೆದ್ವೆದೆವ್ ಅನರ್ಹಗೊಂಡ ಹಿನ್ನೆಲೆಯಲ್ಲಿ ಜೊಕೊವಿಚ್ ಫೈನಲ್‌ಗೆ ಮುನ್ನಡೆದರು. ಪಂದ್ಯದಲ್ಲಿ ೬-೫, ೫-೩, ೧೫-೧೫ ರಿಂದ ಮುನ್ನಡೆ ಸಾಧಿಸಿ, ಜೊಕೊವಿಚ್ ಗೆಲುವಿನ ಸರ್ವ್ ಮಾಡುತ್ತಿದ್ದ ವೇಳೆ, ಮೆದ್ವೆದೆವ್ ಚೆಂಡನ್ನು ಪ್ರೇಕ್ಷಕರತ್ತ ಹೊಡೆದಿದ್ದು, ಅದು ಪ್ರೇಕ್ಷಕರೊಬ್ಬರಿಗೆ ತಗುಲಿತು. ಇದರಿಂದ ಅವರನ್ನು ಅನರ್ಹಗೊಳಿಸಲಾಯಿತು. ಇಂದು ನಡೆಯಲಿರುವ ಫೈನಲ್‌ನಲ್ಲಿ ಜೊಕೊವಿಚ್, ಐದನೇ ಶ್ರೇಯಾಂಕದ ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೌರ್ ಅವರನ್ನು ಎದುರಿಸಲಿದ್ದಾರೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೪.೩೦ಕ್ಕೆ ಆರಂಭವಾಗಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ <>*><>